# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ತಿಂಗಳ ಆರಂಭದಲ್ಲಿ ಜೀವನದಲ್ಲಿನ ಅಡೆತಡೆ ದೂರವಾಗುವುದು. ಆರೋಗ್ಯ ಸುಧಾರಣೆ. ಕೆಲಸದ ಸ್ಥಳ ಮತ್ತು ವ್ಯಾಪಾರದಲ್ಲಿ ಹೊಸ ಉತ್ಸಾಹ, ಆತ್ಮವಿಶ್ವಾಸ ಹೊಂದುವಿರಿ. ಇಷ್ಟ ಮಿತ್ರರ ಸಹಾಯ. ಆರ್ಥಿಕ ವ್ಯವಹಾರವು ಮಧ್ಯಮ ಸ್ಥಿತಿಯಲ್ಲಿರುವುದು. ಕೃಷಿಯಲ್ಲಿ ಲಾಭ. ಶುಭ: 12,16,21. ಅಶುಭ: 10,18,22.

**ವೃಷಭ:** ಉತ್ತಮ ಯೋಜನೆಯಲ್ಲಿ ಹಣ ಹೂಡಿಕೆ ಮಾಡುವ ಅವಕಾಶ. ವ್ಯಾಪಾರಿಗಳಿಗೆ ಲಾಭದ ಯೋಗ. ಪ್ರೀತಿ ಪಾತ್ರರಿಂದ ಶುಭ ಸುದ್ದಿ, ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಜಯ ಲಭಿಸುವ ಸಾಧ್ಯತೆ. ಉದ್ಯೋಗದಲ್ಲಿ ಉನ್ನತ ಸ್ಥಾನಮಾನ ಲಭಿಸುವ ಸಾಧ್ಯತೆ ಶುಭ: 10,16,25. ಅಶುಭ: 12,18,20.





**ಮಿಥುನ:** ತಿಂಗಳ ಆರಂಭದಲ್ಲಿ ನಿಮಗೆ ತುಂಬಾ ಕೆಲಸ ಕಾರ್ಯಗಳಿರುತ್ತದೆ. ಹೆಚ್ಚು ಶ್ರಮ ಹಾಕಿ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಸಹೋದ್ಯೋಗಿಗಳ ಬೆಂಬಲ ಸಿಗಲಿದೆ. ಖರ್ಚು ಹೆಚ್ಚಿರಲಿದೆ. ಉನ್ನತ ಪದವೀಧರರಿಗೆ ವಿದೇಶ ಪ್ರವಾಸ ಯೋಗ. ಶುಭ: 11,19,25. ಅಶುಭ: 13,16,27.

**ಕರ್ಕ:** ತಿಂಗಳ ಆರಂಭದಲ್ಲಿ ಅತಿಯಾದ ಆಯಾಸ ಮತ್ತು ತಲೆನೋವಿನ ಸಮಸ್ಯೆ ಕಾಡಬಹುದು. ಅವಿವಾಹಿತರಿಗೆ ಶುಭಸುದ್ದಿ. ಪ್ರಯತ್ನಕ್ಕೆ ತಕ್ಕ ಫಲವು ದೊರೆಯಲಿದೆ. ಕ್ರೀಡೆ, ಕಲೆ, ಸಾಹಿತ್ಯ, ಕ್ಷೇತ್ರದವರಿಗೆ ಮಧ್ಯಮ ತಿಂಗಳು. ವಿದ್ಯಾರ್ಥಿಗಳಿಗೆ ಶುಭ. ಶುಭ: 14,18,27. ಅಶುಭ 10,26,28.





**ಸಿಂಹ:** ಹಣದ ಕೊರತೆ ಉಂಟಾಗಬಹುದು. ಖರ್ಚುಗಳು ಹೆಚ್ಚಾಗಬಹುದು. ಆರೋಗ್ಯ ಸಮಸ್ಯೆ ಕಾಡಬಹುದು. ತಿಂಗಳ ಕೊನೆಗೆ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಚೇತರಿಕೆ ಕಾಣಬರುತ್ತದೆ . ವಾಹನ ಚಲಾಯಿಸುವಾಗ ಎಚ್ಚರಿಕೆ ವಹಿಸಿ. ಕೃಷಿ ಉತ್ಪನ್ನಗಳಿಂದ ಲಾಭ. ಶುಭ: 17,19,25. ಅಶುಭ: 10,14,26.

**ಕನ್ಯಾ:** ವಾಹನ ಸೌಖ್ಯವಿದೆ. ಕೈತಪ್ಪಿ ಹೋಗಿರುವ ಅಧಿಕಾರ ಸಿಗಲಿದೆ. ಮಕ್ಕಳಿಂದ ಮಾನಸಿಕ ಕಿರಿಕಿರಿ. ಮನೆಗೆ ನೆಂಟರ ಆಗಮನದಿಂದ ಸಂತಸ. ಸಣ್ಣ ಪ್ರವಾಸ ಯೋಗ. ಬರತಕ್ಕ ಬಾಕಿ ಹಣ ದೊರಕಬಹುದು. ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ಶುಭ: 11,16,22. ಅಶುಭ: 15,18,27.





**ತುಲಾ:** ತಿಂಗಳ ಆರಂಭದಲ್ಲಿ ನಿಮ್ಮ ಕೌಟುಂಬಿಕ ಜೀವನದಲ್ಲಿ ಸಣ್ಣ ಸಮಸ್ಯೆ ಎದುರಾಗಬಹುದು. ಅಹಂಕಾರವನ್ನು ದೂರವಿಡಿ. ವಾದಗಳಿಂದ ದೂರವಿರಿ. ಕಚೇರಿಯಲ್ಲಿ ಸಹೋದ್ಯೋಗಿಗಳಿಂದ ಬೆಂಬಲ . ವೃತ್ತಿಜೀವನದ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸುವಿರಿ. ಶುಭ: 10,16,19. ಅಶುಭ: 11,20,26.

**ವೃಶ್ಚಿಕ:** ಉದ್ಯಮಿಗಳು ಹೊಸ ಆರ್ಥಿಕ ಒಪ್ಪಂದ ಮಾಡಿಕೊಳ್ಳುವಿರಿ. ಕುಟುಂಬದ ಜೊತೆ ಕಟ್ಟುನಿಟ್ಟಾಗಿ ವರ್ತಿಸಬೇಡಿ. ತಿಂಗಳಾಂತ್ಯದಲ್ಲಿ ಅನಗತ್ಯ ತಿರುಗಾಟ. ಪೋಷಕರಿಂದ ಹಣಕಾಸಿನ ನೆರವು ಸಾಧ್ಯತೆ. ಬೆನ್ನು ನೋವು ಕಾಣಿಸಬಹುದು. ಶುಭ: 14,18,23. ಅಶುಭ: 17,25,27.





**ಧನು:** ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ಹೊಸದಾಗಿ ವ್ಯವಹಾರಿಕ ಹೊಂದಾಣಿಕೆ ಒಪ್ಪಂದ ಮಾಡಲು ಇದು ಅತ್ಯುತ್ತಮ ಸಮಯ. ಸಹೋದ್ಯೋಗಿಗಳು ನಿಮ್ಮ ಪರ ಕೆಲಸ ಮಾಡುತ್ತಾರೆ. ನಿಮ್ಮ ಮೇಲಧಿಕಾರಿಗಳು ನಿಮ್ಮ ಪ್ರಗತಿಯನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುವರು. ಶುಭ: 10,16,26. ಅಶುಭ: 15,19,27.

**ಮಕರ:** ತಿಂಗಳ ಶುರುವಿನಲ್ಲೇ ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತೀರಿ. ಉದ್ಯೋಗಸ್ಥರು ಹಿಂದೆಂದಿಗಿಂತ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುತ್ತೀರಿ. ಸಾಮಾಜಿಕ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ ಇಡುವಿರಿ. ಮಕ್ಕಳಿಂದ ಧನಲಾಭ. ಶುಭ: 16,22,28. ಅಶುಭ: 12,19,26.





**ಕುಂಭ:** ಉತ್ತಮ ಫಲ ಪ್ರಾಪ್ತಿಯ ರಾಶಿಯಿದು. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಂಭವ. ವ್ಯಾಪಾರಸ್ಥರಿಗೆ ಲಾಭ. ಕುಟುಂಬ ಸೌಖ್ಯ. ನಿಮ್ಮ ಪೋಷಕರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರಿ. ಮನೆಗೆ ಬಂಧುಗಳ ಆಗಮನದಿಂದ ಸಂಭ್ರಮದ ವಾತಾವರಣ. ಶುಭ: 12,19,27. ಅಶುಭ: 11,18,28.

**ಮೀನ:** ಕೌಟುಂಬಿಕ ವಿಚಾರಗಳಲ್ಲಿ ಉತ್ತಮವಾದ ಪ್ರಗತಿ. ಮಗ ಅಥವಾ ಮಗಳ ಸಲುವಾಗಿ ಮದುವೆ ಸಂಬಂಧಗಳನ್ನು ಹುಡುಕುತ್ತಿದ್ದಲ್ಲಿ ಅದರಲ್ಲಿ ಯಶಸ್ಸು ಕಾಣುವ ಅವಕಾಶ ಹೆಚ್ಚಾಗಿದೆ. ಭೂಖರೀದಿ ವ್ಯವಹಾರಗಳಲ್ಲಿ ಲಾಭ. ಶುಭ: 12,18,22. ಅಶುಭ: 10,19,26.

